ಆಗ ತಕ್ಕ ಪ್ರಶ್ನೆಯನ್ನು ಅವರು ಕೇಳಬಹುದು. ಅಲ್ಲಿ ಸ್ಟೈಕ್ ಕೂತಿರುವುದಕ್ಕೆ ನನಗೆ ಸಂಬಂಧವಿಲ್ಲ. ಬಹಳ ಮಟ್ಟಿಗೆ ಅದು ಅವರಿಗೆ ಸರಿಯಾಗಿ ಕಂಡಿರಬಹುದು. ಇದರ ಬಗ್ಗೆ ಹೆಚ್ಚಾಗಿ ಹೇಳಲಿಕ್ಕೆ ನಾನು ತಯಾರಿಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ.—ಅನುಸೂಚಿತ ಜಾತಿ, ಮತ್ತು ಅನುಸೂಚಿತ ಪಂಗಡದವರಿಗೆ ಪ್ರಮೋಷನ್‌ನಲ್ಲಿ ೧೮ ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟಿಲ್ಲ, ಬಹಳ ಕಡಿಮೆ ಸ್ಥಾನವನ್ನು ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಅಧಿಕಾರಿಗಳು ಈ ಸಂದರ್ಭದಲ್ಲಿ ಎಫಿಷಿಯನ್ಸಿಯ ಬಗ್ಗೆ ಮಾತನಾಡುತ್ತಿದ್ದಾರೆ. ಈಗ ಆಗ್ಮೋ ಇಂಡಸ್ಟ್ರೀಸ್‌ನಲ್ಲಿ ಬೇರೆ ಅಧಿಕಾರಿಗಳಿಂದ ಇಷ್ಟು ಲಾಸ್ ಆಗುವುದಕ್ಕೆ ಕಾರಣವಾಗಿದ್ದರೆ ಅವರು ಎಫಿಷಿಯಂಟ್ ಎಂದು ಹೇಳುತ್ತೀರಾ ? ಅವರ ಮೇಲೆ ತೀವ್ರ ಕಾರ್ಯಕ್ರಮ ತೆಗೆದುಕೊಂಡು, ಕೆಲಸ ಮಾಡತಕ್ಕ ಎಸ್.ಸಿ. ಮತ್ತು ಎಸ್.ಟಿ. ಅವರಿಗೆ ಯೋಗ್ಯ ಪ್ರಮಾಣದಲ್ಲಿ ಮೀಸಲಾತಿಯನ್ನು ಕೊಡುವುದಕ್ಕೆ ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ.ಹೆಚ್. ರಂಗನಾಥ್.—ಈ ಕಂಪನಿಗಳಲ್ಲಿ, ಅಟಾನಮಸ್‌ಬಾಡಿಗಳಲ್ಲಿ ನೇಮಕಾತಿಗಳು ಹೇಗೆ ಆಗುತ್ತವೆಂದರೆ, ನಮಗೆ ಯಾರಿಗೆ ಯಾರಾರು ಬೇಕೋ ಅವರಿಗೆ ಅಪಾಯಿಂಟ್‌ಮೆಂಟ್ ಮಾಡುತ್ತೇವೆ. ನಾಲ್ಕು ವರ್ಷಗಳಾದ ಮೇಲೆ ಅವರನ್ನು ರೆಗ್ಯುಲರೈಸ್ ಮಾಡುವ ಪ್ರಶ್ನೆ ಬರುತ್ತದೆ. ಆದನ್ನೂ ಸೀನಿಯಾರಿಟಿ ಮೇಲೆ ಮಾಡುತ್ತೇವೆ. ಇನ್ನು ಮೇಲೆ ಈ ಸಂಸ್ಥೆಯಲ್ಲಿ ಎಷ್ಟು ವೇಕೆನ್ಸಿಗಳು ಬರುತ್ತವೆಯೋ ಅಷ್ಟರಲ್ಲಿ ಇವರಿಗೆ ದಾಮಾಷ ಕೊಡಬೇಕೋ ಅಷ್ಟನ್ನು ಕೊಡುವಂತೆ ತಿಳಿಸಲಾಗಿದೆ. ಇಲ್ಲದೇ ಹೋದರೆ, ಅಧಿಕಾರಿಗಳು ಶಿಕ್ಷೆಗೆ ಒಳಗಾಗತಕ್ಕಂಥ ವಿಚಾರವನ್ನು ಅಲ್ಲಿ ನಮೂದು ಮಾಡತಕ್ಕ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

Graduate teachers belonging to S.C. and S.T.s.

154 SRI B.H. LAKSHMANAIAH (Belur)—Will the Minister for Education be pleased to state :—

(a) the number of Primary School teachers who have passed the degree examination in the Education Department for the last three years, in each Division (year-wise figures) of them how many teachers belong to S.C. and S.T. Communities.

(b) of them how many have been promoted as graduate teachers in each division ;

(c) among the promoted graduate teachers how many S.C. and S.T. teachers have been promoted in each division ?

SRI B. SUBBAYYA SHETTY (Minister for Education)—

		75-76	76-77	77-78	S.C.	S.T.
(a)	Bangalore Division ...	298	333	285	52	13
	Mysore Division ...	185	254	135	22	6
	Gulbarga Division ...	334	196	165	39	1
	Belgaum Division ...	231	212	174	50	6

(b)	Bangalore Division ...	Nil
	Mysore Division ...	Nil
	Gulbarga Division ...	150
	Belgaum Division ...	20

		S.C.	S.T.
(c) Bangalore Division	...	Nil	Nil
Mysore Division	...	Nil	Nil
Gulbarga Division	...	Nil	Nil
Belgaum Division	...	4	Nil

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.— ಪ್ರೈಮರಿ ಶಾಲೆಗಳ ಉಪಾಧ್ಯಾಯರುಗಳು ಪದವೀಧರರಾದಾಗ ಅವರಿಗೆ ಮುಂಬಡ್ತಿ ಕೊಡುವಂಥ ಸರ್ಕಾರದ ಆದೇಶವನ್ನು ಯಾವಾಗ ಹೊರಡಿಸಿದ್ದೀರಿ ? ಬೆಂಗಳೂರು –ಮೈಸೂರು ವಿಭಾಗಗಳಲ್ಲಿ ಇದುವರಿಗೆ ಇಂಥ ಪದವೀಧರರಿಗೆ ಮುಂಬಡ್ತಿ ಕೊಡದೆ ಇರಲು ಕಾರಣವೇನು?

†ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಇವರಿಗೆ ಪ್ರಮೋಷನ್‌ನಲ್ಲಿ ನಾವು ೨೫ ಪರ್ಸೆಂಟ್ ಕೊಡುತ್ತೇವೆ, ೭೫ ಪರ್ಸೆಂಟ್ ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ಕೊಡುತ್ತೇವೆ. ೧-೭-೧೯೭೧ರ ವೆ.ದಲು ಡಿವಿಷನಲ್ ಡೆಪ್ಯೂಟಿ ಡೈರೆಕ್ಟರ್ ಅವರು ಪ್ರೈಮರಿ ಶಾಲಾ ಉಪಾಧ್ಯಾಯರುಗಳಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಆಗ ಅವರೇ ಕಾಂಪಿಟೆಂಟ್ ಅಥಾರಿಟಿ ಎಂದು ತಿಳಿದುಕೊಂಡು ಕೊಟ್ಟಿದ್ದರು. ನಂತರ ರೀ ಆರ್ಗನೈಜೇಷನ್ ಆದಮೇಲೆ ಈ ಹುದ್ದೆಗಳನ್ನು ಡಿಸ್ಟ್ರಿಕ್ಟ್ ಡೆಪ್ಯೂಟಿ ಡೈರೆಕ್ಟರ್ ಅವರಿಗೆ ಡೆಲಿಗೇಟ್ ಮಾಡಲಾಯಿತು. ಆದರೆ ಸಿ.ಸಿ.ಎ. ರೂಲ್‌ಗೆ ನಾವು ಇದರ ಬಗ್ಗೆ ನೆಸಸರಿ ಅಮೆಂಡ್‌ಮೆಂಟ್ಸ್ ತರಲಿಲ್ಲ. ತರದೆ ಇದ್ದುದರಿಂದ ಡಿ.ಡಿ.ಪಿ.ಐ. ಅವರು ಮಾಡಿದಂಥ ಆರ್ಡರನ್ನು ಕೋರ್ಟಿನಲ್ಲಿ ಪ್ರಶ್ನೆ ಮಾಡಿ, ಇದಕ್ಕೆ ಸ್ಟೇ ಮಾಡಿದ್ದ ಕಾರಣ ಕೆಲವು ಕಡೆಗಳಲ್ಲಿ ಪ್ರಮೋಷನ್ಸ್ ಕೊಟ್ಟಿದೆ, ಕೆಲವು ಕಡೆ ಕೊಡಲಾಗಲಿಲ್ಲ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಗುಲ್ಬರ್ಗ ಮತ್ತು ಬೆಳಗಾಂ ಡಿವಿಷನ್‌ಗಳಲ್ಲಿ, ಗುಲ್ಬರ್ಗದಲ್ಲಿ ೧೫೦ ಜನರಿಗೆ, ಬೆಳಗಾಂ ನಲ್ಲಿ ೨೦ ಜನಕ್ಕೆ ಪ್ರಮೋಷನ್ ಕೊಟ್ಟಿದೆ. ಆದರೆ ಮೈಸೂರು–ಬೆಂಗಳೂರು ವಿಭಾಗಗಳಲ್ಲಿ ಇದನ್ನು ಕೊಡದೇ ಇರುವುದಕ್ಕೆ ಕಾರಣವೇನು ಸ್ವಾಮಿ ? ಬೆಳಗಾಂ ವಿಭಾಗದಲ್ಲಿ ಮಾತ್ರ ಎಸ್.ಸಿ. ನಾಲ್ಕು ಜನಕ್ಕೆ ಪ್ರಮೋಷನ್ ಕೊಟ್ಟಿದ್ದಾರೆ, ಗುಲ್ಬರ್ಗದಲ್ಲಿ ಕೊಟ್ಟಿಲ್ಲ. ಬೆಳಗಾಂ ಜಿಲ್ಲೆಯಲ್ಲಿ ಎಸ್.ಟಿ. ಅವರಿಗೆ ಕೊಟ್ಟಿಲ್ಲ, ಮೈಸೂರು ಬೆಂಗಳೂರು ವಿಭಾಗದಲ್ಲಿ ಯಾರಿಗೂ ಕೊಡದೆ ಇರುವುದಕ್ಕೆ ಕಾರಣ ಏನು ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಪ್ರಮೋಷನ್ ವೇಕೆನ್ಸಿಯಲ್ಲಿ ಎಸ್.ಸಿ. ಮತ್ತು ಎಸ್.ಟಿ. ಯವರಿಗೆ ರಿಸರ್ವೇಷನ್ ಕೊಡಬೇಕೆಂದು ನವೆಂಬರ್ ೧೯೭೮ರಲ್ಲಿ ಬಂತು. ಅದಕ್ಕೆ ಮೊದಲು ಇದರಲ್ಲಿ ರಿಸರ್ವೇಷನ್ ಇರಲಿಲ್ಲ. ಮೊದಲು ೨೫ ಪರ್ಸೆಂಟ್ ಪ್ರಮೋಷನ್‌ನ್ನು ೧ ಕ್ವಾಲಿಫಿಕೇಷನ್, ಮತ್ತೊಂದು ಸೀನಿಯಾರಿಟಿ ಕನ್‌ಸಿಡರ್ ಮಾಡಿ ಕೊಡುತ್ತಿದ್ದರು. ಈ ರೀತಿಯಾಗಿದ್ದುದರಿಂದ ಬಹುಶಃ ಅವರ ನಂಬರ್ ಕಡಿಮೆ ಬಂದಿರಬಹುದು ಎಂದು ಕಾಣುತ್ತದೆ. ಪ್ರಮೋಷನ್‌ನಲ್ಲಿ ೧೮ ಪರ್ಸೆಂಟ್ ರಿಸರ್ವೇಷನ್ ಮೊದಲು ಇರಲಿಲ್ಲ. ಇನ್ನು ಮುಂದಕ್ಕೆ ಹಾಗೆ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.— ಸೀನಿಯಾರಿಟಿಯ ಪ್ರಶ್ನೆ ಇಲ್ಲಿ ಬರುವುದಿಲ್ಲ, ಪ್ರೈಮರಿ ಶಾಲೆ ಉಪಾಧ್ಯಾಯರುಗಳಿಗೆ, ಅವರು ಪದವೀಧರರಾದರೆ, ಅವರಿಗೆ ಮುಂಬಡ್ತಿ ಕೊಡುತ್ತಿದ್ದರು. ಹದಿನೆಂಟು ಪರ್ಸೆಂಟ್ ಮಿಸಲಾತಿಯನ್ನು ನವೆಂಬರ್ ೭೮ರಿಂದ ಜಾರಿಗೆ ಕೊಡಲಾಯಿತು ಎಂದು ಹೇಳಿದ್ದೀರಿ, ಇದಕ್ಕೆ ಮೊದಲು ಎಷ್ಟು ಜನಕ್ಕೆ ಪ್ರಮೋಷನ್ ಕೊಟ್ಟಿದ್ದೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಆ ಮಾಹಿತಿ ನನ್ನಲ್ಲಿಲ್ಲ, ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ.